# All India Radio: Bangalore
# National Bulletin In Kannada
# 15.06.2025 19.35 p.m.

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ಮೂರು ರಾಷ್ಟ್ರಗಳ ಪ್ರವಾಸದ ಮೊದಲ ಹಂತದಲ್ಲಿ ಸೈಪ್ರಸ್ ತಲುಪಿದ ಪ್ರಧಾನಿ ನರೇಂದ್ರ ಮೋದಿ ; ಅಧ್ಯಕ್ಷ ಕ್ರಿಸ್ಟೋ ಡೌವ್‌ಲೈಡ್ಸ್ ಜೊತೆ ದ್ವಿಪಕ್ಷೀಯ ಮಾತುಕತೆ
2. ಮುಂದಿನ ವರ್ಷದ ಮಾರ್ಚ್ ವೇಳೆಗೆ ದೇಶ ನಕ್ಸಲರ ಹಾವಳಿಯಿಂದ ಮುಕ್ತ ; ಕೇಂದ್ರ ಗೃಹ ಸಚಿವ ಅಮಿತ್ ಶಾ ವಿಶ್ವಾಸ
3. ಮಹಾರಾಷ್ಟ್ರದಲ್ಲಿ ಭಾರೀ ಮಳೆ; ಪುಣೆ ಸಮೀಪ ಸೇತುವೆ ಕುಸಿದು ಹಲವರು ನೀರು ಪಾಲಾಗಿರುವ ಶಂಕೆ
4. ಅಹಮದಾಬಾದ್ ವಿಮಾನ ದುರಂತ ; ೩೨ ಮೃತರ ಡಿಎನ್‌ಎ ಮಾದರಿ ಹೊಂದಾಣಿಕೆ

<><><><>

ಪ್ರಧಾನಿ ನರೇಂದ್ರ ಮೋದಿ ಅವರು, ತಮ್ಮ ಮೂರು ದೇಶಗಳ ಪ್ರವಾಸದ ಮೊದಲ ಚರಣದಲ್ಲಿ ೨ ದಿನಗಳ ಭೇಟಿಗಾಗಿ ಇಂದು ಸೈಪ್ರಸ್ ತಲುಪಿದ್ದಾರೆ. ಅವರನ್ನು ಲಾರ್ನಾಕ ವಿಮಾನ ನಿಲ್ದಾಣದಲ್ಲಿ ಸೈಪ್ರಸ್ ಅಧ್ಯಕ್ಷ ಕ್ರಿಸ್ಟೋ ಡೌವ್‌ಲೈಡ್ಸ್ ಅವರು, ಬರಮಾಡಿಕೊಂಡರು. ನಂತರ ಪ್ರಧಾನಿಯವರು ಲೆಮಸೋಸ್‌ಗೆ ತೆರಳಿದರು. ಅಲ್ಲಿ ಅವರಿಗೆ ಭಾರತೀಯ ಸಮುದಾಯ ಹಾಗೂ ಸ್ಥಳೀಯ ಜನರು ಅಭೂತಪೂರ್ವ ಸ್ವಾಗತ ನೀಡಿದರು. ವಿದ್ಯಾರ್ಥಿಗಳು, ವೃತ್ತಿಪರರು ಹಾಗೂ ಭಾರತೀಯ ಮೂಲದ ಸಮುದಾಯದ ಜನರು ಈ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಈ ಸಂದರ್ಭವನ್ನು ಭಾರತ ಮತ್ತು ಸೈಪ್ರಸ್ ನಡುವಣ ಆಳವಾದ ಸ್ನೇಹದ ಹೆಗ್ಗುರುತಿನ ಕ್ಷಣವೆಂದು ಪರಿಗಣಿಸಲಾಯಿತು. ನಂತರ ಉಭಯ ನಾಯಕರು ಭಾರತೀಯ ಮತ್ತು ಸೈಪ್ರಸ್ ಉದ್ಯಮಿಗಳೊಂದಿಗೆ ದುಂಡು ಮೇಜಿನ ಸಭೆಯಲ್ಲಿ ಭಾಗವಹಿಸಲಿದ್ದಾರೆ. ನಾಳೆ ಪ್ರಧಾನಿ ಮೋದಿಯವರು ನಿಕೋಸಿಯಾದಲ್ಲಿ ಅಧ್ಯಕ್ಷ ಕ್ರಿಸ್ಟೋ ಡೌವ್‌ಲೈಡ್ಸ್ ಅವರೊಂದಿಗೆ ವ್ಯಾಪಾರ, ಹೂಡಿಕೆ, ಶಿಕ್ಷಣ, ಡಿಜಿಟಲ್ ಸಹಕಾರ, ಪ್ರಾದೇಶಿಕ ಭದ್ರತೆಯಂತಹ ಪ್ರಮುಖ ವಿಷಯಗಳ ಕುರಿತು ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಭಾರತ-ಯೂರೋಪ್ ಪಾಲುದಾರಿಕೆ ಭಾರತ-ಮಧ್ಯಪ್ರಾಚ್ಯ-ಯೂರೋಪ್ ಆರ್ಥಿಕ ಕಾರಿಡಾರ್ ಸೇರಿದಂತೆ ಅಂತಾರಾಷ್ಟ್ರೀಯ ಬೆಳವಣಿಗೆಗಳ ಕುರಿತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳುವ ಸಾಧ್ಯತೆಯಿದೆ. ಜಿ-೭ ಶೃಂಗಸಭೆಗಾಗಿ ಕೆನಡಾಗೆ ತೆರಳುವ ಮೊದಲು ಪ್ರಧಾನಿ ಮೋದಿ ಅವರ ಗೌರವಾರ್ಥವಾಗಿ ಅಧ್ಯಕ್ಷರ ಭವನದಲ್ಲಿ ಆಯೋಜಿಸಲಾಗಿರುವ ಔತಣ ಕೂಟದೊಂದಿಗೆ ಸೈಪ್ರಸ್ ಪ್ರವಾಸ ಸಮಾಪನಗೊಳ್ಳಲಿದೆ.

<><><><>

ಮುಂದಿನ ವರ್ಷದ ಮಾರ್ಚ್ ೩೧ರ ವೇಳೆಗೆ ಭಾರತವು ನಕ್ಸಲರ ಹಾವಳಿಯಿಂದ ಸಂಪೂರ್ಣವಾಗಿ ಮುಕ್ತವಾಗಲಿದೆ ಎಂದು ಕೇಂದ್ರ ಸಚಿವ ಅಮಿತ್ ಶಾ ಹೇಳಿದ್ದಾರೆ. ಲಖನೌದಲ್ಲಿ ಉತ್ತರಪ್ರದೇಶ ಪೊಲೀಸ್ ಇಲಾಖೆಯಿಂದ ಹೊಸದಾಗಿ ನೇಮಕಗೊಂಡ ೬೦ ಸಾವಿರದ ೨೪೪ ಕಾನ್ಸ್‌ಟೇಬಲ್‌ಗಳಿಗೆ ನೇಮಕಾತಿ ಪತ್ರ ವಿತರಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಕೇಂದ್ರ ಗೃಹ ಸಚಿವರು, ಒಂದು ಕಾಲದಲ್ಲಿ ದೇಶದ ೧೧ ರಾಜ್ಯಗಳಲ್ಲಿ ಹರಡಿದ್ದ ನಕ್ಸಲರ ಪಿಡುಗು ಈಗ ಕೇವಲ ೩ ಜಿಲ್ಲೆಗಳಿಗೆ ಸೀಮಿತವಾಗಿದೆ ಎಂದು ಹೇಳಿದರು. ಪ್ರಧಾನಿ ನರೇಂದ್ರ ಮೋದಿ ನಾಯಕತ್ವದಲ್ಲಿ ದೇಶದ ಪೊಲೀಸ್ ಪಡೆಯ ಆಧುನೀಕರಣ ಪ್ರಾರಂಭವಾಗಿದ್ದು, ಉತ್ತರಪ್ರದೇಶದಲ್ಲಿ ೨೦೧೭ರಲ್ಲಿ ಆರಂಭಗೊಂಡಿತು ಎಂದು ವಿವರಿಸಿದರು. ಈ ಹಿಂದೆ ಪೊಲೀಸ್ ಪಡೆಯಲ್ಲಿ ಜಾತಿ ಆಧಾರದ ಮೇಲೆ ನೇಮಕಾತಿ ಮಾಡಲಾಗುತ್ತಿತ್ತು. ಆದರೆ ಇಂದು ಎಲ್ಲ ಅಭ್ಯರ್ಥಿಗಳನ್ನು ತಂತ್ರಜ್ಞಾನದ ಮೂಲಕ ಸಂಪೂರ್ಣ ಪಾರದರ್ಶಕತೆಯೊಂದಿಗೆ ನೇಮಕ ಮಾಡಲಾಗಿದೆ ಎಂದು ಹೇಳಿದರು. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ಆಡಳಿತವನ್ನು ಶ್ಲಾಘಿಸಿದ ಅಮಿತ್ ಶಾ ಉತ್ತರಪ್ರದೇಶ ಈಗ ಕಾನೂನು ಆಳ್ವಿಕೆಗೆ ದೇಶದಲ್ಲಿಯೇ ಹೆಸರುವಾಸಿಯಾಗಿದೆ ಎಂದು ಹೇಳಿದರು.

<><><><>

ಮುಂಬರುವ ದಿನಗಳಲ್ಲಿ ಭಾರತದ ಅಭಿವೃದ್ಧಿಯ ಹಾದಿಯಲ್ಲಿ ಬಾಹ್ಯಾಕಾಶ ಆರ್ಥಿಕತೆ ಪ್ರಮುಖ ಪಾತ್ರ ವಹಿಸಲಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಜಿತೇಂದ್ರ ಸಿಂಗ್ ಹೇಳಿದ್ದಾರೆ. ನವದೆಹಲಿಯಲ್ಲಿಂದು

ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವರು ಕಳೆದ ೧೦ ವರ್ಷಗಳಲ್ಲಿ ಬಾಹ್ಯಾಕಾಶ ಕ್ಷೇತ್ರವನ್ನು ಖಾಸಗಿ ವಲಯಕ್ಕೆ ತೆರೆಯವುದು ಮತ್ತು ಪರಮಾಣು ವಲಯಕ್ಕೆ ಸಂಬಂಧಿಸಿದಂತೆ ವರ್ಷದ ಆರಂಭದಲ್ಲಿ ಮಾಡಿದ ಘೋಷಣೆ ಸೇರಿದಂತೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದಿಂದ ಹಲವು ಅನಿರೀಕ್ಷಿತ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಎಲ್ಲ ಕ್ಷೇತ್ರಗಳಲ್ಲಿ ವಿವಿಧ ಉಪಕ್ರಮಗಳ ಮೂಲಕ ಪಾರದರ್ಶಕತೆಯನ್ನು ಉತ್ತೇಜಿಸಲಾಗಿದೆ. ನಾವೀನ್ಯತೆಯಡಿಗಿನ ಹಾದಿಯನ್ನು ಸರಳಗೊಳಸಲಾಗಿದೆ ಎಂದರು. ಇದೇ ವೇಳೆ ಅವರು, ಸೇವಾಚಾಲಿತ ಆರ್ತಿಕತೆಯಿಂದ ನಾವೀನ್ಯತಾ ಚಾಲಿತ ಆರ್ಥಿಕತೆಯಡೆಗೆ ಭಾರತ ಹೇಗೆ ಪರಿವರ್ತನೆಯಾಗುತ್ತಿದೆ ಎಂಬುದರ್ ಕುರಿತು ಒತ್ತಿ ಹೇಳಿದರು.

<><><><>

ಮಹಾರಾಷ್ಟ್ರದ ಪುಣೆ ಬಳಿಯ ಮಾವಲ್ ತಾಲೂಕಿನಲ್ಲಿ ಇಂದ್ರಯಾಣಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದ್ದ ಹಳೆಯ ಸೇತುವೆಯೊಂದು ಕುಸಿದಿದ್ದು, ಸುಮಾರು ೨೫ ರಿಂದ ೩೦ ಪ್ರವಾಸಿಗರು ನದಿಯಲ್ಲಿ ಮುಳುಗಿರಬಹುದು ಎಂದು ಶಂಕಿಸಲಾಗಿದೆ. ತಲೆಗಾಂವ್ ದಬಾಡೆ ನಗರದ ಪ್ರಸಿದ್ಧ ಪ್ರವಾಸಿತಾಣ ಕುಂಡ್ಮಲದಲ್ಲಿ ಈ ಘಟನೆ ನಡೆದಿದೆ. ಇಂದು ಭಾನುವಾರವಾದ ಕಾರಣ ಈ ಪ್ರದೇಶ ಹೆಚ್ಚಿನ ಪ್ರವಾಸಿಗರಿಂದ ತುಂಬಿತ್ತು. ಕೆಲವರು ಸೇತುವೆ ಮೇಲೆ ನಿಂತಿದ್ದಾಗ ಅದು ಇದಕ್ಕಿದ್ದಂತೆ ಕುಸಿದು ಬಿದ್ದಿದ್ದು, ಹಲವರು ನದಿ ಪಾಲಾಗಿದ್ದಾರೆ. ಮಾವಲ್ ಪ್ರದೇಶದಲ್ಲಿ ಕಳೆದ ೨ ದಿನಗಳಿಂದ ಭಾರೀ ಮಳೆಯಾಗುತ್ತಿದೆ. ಸ್ಥಳೀಯ ಆಡಳಿತ, ಅಗ್ನಿಶಾಮಕ ದಳದ ತಂಡಗಳು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿದೆ.

<><><><>

ಗುಜರಾತ್‌ನ ಅಹಮದಾಬಾದ್‌ನಲ್ಲಿ ನಡೆದ ವಿಮಾನ ಅಪಘಾತದಲ್ಲಿ ಈವರೆಗೆ ಒಟ್ಟು ೩೨ ಮೃತರ ಡಿಎನ್ಎ ಮಾದರಿ ಹೊಂದಾಣಿಕೆ ಮಾಡಲಾಗಿದ್ದು, ೧೪ ಮೃತದೇಹಗಳನ್ನು ಸಂಬಂಧಪಟ್ಟವರ ಕುಟುಂಬಗಳಿಗೆ ಹಸ್ತಾಂತರಿಸಲಾಗಿದೆ. ಗುಜರಾತ್ ಮಾಜಿ ಮುಖ್ಯಮಂತ್ರಿ ವಿಜಯ್ ರುಪಾನಿ ಅವರ ಡಿಎನ್ಎ ಮಾದರಿ ಸಹ ಹೊಂದಾಣಿಕೆಯಾಗಿದೆ ಎಂದು ರಾಜ್ಯ ಗೃಹ ಸಚಿವ ಹರ್ಷ ಸಾಂಘ್ವಿ ದೃಢಪಡಿಸಿದ್ದಾರೆ. ಗಾಂಧೀನಗರದ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಡಿಎನ್ಎ ಮಾದರಿಯಿಂದ ಹೊಂದಾಣಿಕೆವರೆಗಿನ ಪ್ರಕ್ರಿಯೆಯು ನಿರಂತರವಾಗಿ ನಡೆಸಲಾಗುತ್ತಿದೆ. ಅಹಮದಾಬಾದ್ ವಿಮಾನ ಅಪಘಾತ ಪ್ರಕರಣದಲ್ಲಿ ಡಿಎನ್ಎ ಪ್ರೊಫೈಲಿಂಗ್ ಮತ್ತು ಹೊಂದಾಣಿಕೆ ಪ್ರಕ್ರಿಯೆ ಬಗ್ಗೆ ಎಫ್‌ಎಸ್‌ಎಲ್ ನಿರ್ದೇಶಕ ಎಚ್.ಪಿ. ಸಾಂಘ್ವಿ ಮಾಹಿತಿ ನೀಡಿದ್ದಾರೆ. ಡಿಎನ್ಎ ಮಾದರಿಗಳನ್ನು ಪಡೆಯಲು ಪ್ರಮುಖವಾಗಿ ೨ ವಿಧಾನಗಳಿವೆ. ಸಂಪೂರ್ಣ ಪ್ರಕ್ರಿಯೆ ನಂತರವೂ ಸಾಕಷ್ಟು ಪ್ರಮಾಣದ ಡಿಎನ್ಎ ವಂಶವಾಹಿಗಳು ಕಂಡು ಬರದಿದ್ದರೆ ಸಂಪೂರ್ಣ ಪ್ರಕ್ರಿಯೆಯನ್ನು ಮತ್ತೊಮ್ಮೆ ನಡೆಸಲಾಗುತ್ತದೆ ಎಂದು ವಿವರಿಸಿದ್ದಾರೆ. ಈ ರೀತಿಯಲ್ಲಿ ಪಡೆದ ಡಿಎನ್ಎ ವಂಶವಾಹಿಗಳನ್ನು ಮೃತರ ಕುಟುಂಬ ಸದಸ್ಯರ ಡಿಎನ್ಎ ವಂಶವಾಹಿಗಳೊಂದಿಗೆ ಹೋಲಿಸಲಾಗುತ್ತದೆ. ೨೩ ಡಿಎನ್ಎ ವಂಶವಾಹಿಗಳು ಹೊಂದಾಣಿಕೆಯಾದರೆ ಮಾತ್ರ ಸರಿಯಾಗಿ ಗುರುತಿಸಲಾಗುತ್ತದೆ. ತಂದೆ-ಮಗನ ಸಂದರ್ಭದಲ್ಲಿ ದೃಢೀಕರಿಸಲು ಕ್ರೋಮೊಸೊಮ್ ಪರೀಕ್ಷೆ ಮಾಡಲಾಗುತ್ತದೆ ಎಂದು ವಿವರಿಸಿದ್ದಾರೆ.

<><><><>

ಏಳು ಜನರ ಸಾವಿಗೆ ಕಾರಣವಾದ ಉತ್ತರಾಖಂಡ ಕೇದರನಾಥ್ ದೇಗುಲದ ಸಮೀಪ ಇಂದು ಬೆಳಗ್ಗೆ ಸಂಭವಿಸಿದ ಹೆಲಿಕಾಪ್ಟರ್ ಅಪಘಾತ ಕುರಿತಂತೆ ವಿಮಾನ ಅಪಘಾತ ತನಿಖಾ ಸಂಸ್ಥೆ ತನಿಖೆ ನಡೆಸಲಿದೆ. ಘಟನೆ ಬೆನ್ನಲ್ಲೆ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಉನ್ನತಮಟ್ಟದ ಸಭೆ ನಡೆಸಿದ್ದು, ಸಭೆಯಲ್ಲಿ ಕೇಂದ್ರ ನಾಗರಿಕ ವಿಮಾನಯಾನ ಕಾರ್ಯದರ್ಶಿ, ಡಿಜಿಸಿಎ ಹಾಗೂ ಸಂಬಂಧಿತ ತಂಡಗಳು ಪಾಲ್ಗೊಂಡಿದ್ದವು. ಸುರಕ್ಷತಾ ಮುಂಜಾಗ್ರತ ಕ್ರಮವಾಗಿ ನಾಳೆಯವರೆಗೆ ಆ ಪ್ರದೇಶದಲ್ಲಿ ಎಲ್ಲ ರೀತಿಯ ಚಾರ್ಟರ್ ಮತ್ತು ಶಟಲ್ ಹೆಲಿಕಾಪ್ಟರ್ ಕಾರ್ಯಾಚರಣೆಯನ್ನು ನಿರ್ಬಂಧಿಸಲಾಗಿದೆ. ಕೇದಾರನಾಥದಿಂದ ಗುಪ್ತ ಕಾಶಿಗೆ ೬ ಪ್ರಯಾಣಿಕರು ಹಾಗೂ ಒಬ್ಬ ಸಿಬ್ಬಂದಿಯೊಂದಿಗೆ ಹೆಲಿಕಾಫ್ಟರ್ ತೆರಳುತ್ತಿದ್ದಾಗ ಅಪಘಾತ ಸಂಭವಿಸಿದ್ದು, ಇದರಲ್ಲಿ ೭ ಮಂದಿ ಮೃತಪಟ್ಟಿದ್ದಾರೆ.

ವಾಯುಯಾನ ಸುರಕ್ಷತೆ ಬಗ್ಗೆ ಯಾವುದೇ ರಾಜಿ ಪ್ರಶ್ನೆಯೇ ಇಲ್ಲ. ಯಾವುದೇ ನಿರ್ವಾಹಕರು ಹವಾಮಾನ ಸಂಬಂಧಿತ ಹಾಗೂ ಇತರ ಶಿಷ್ಟಾಚಾರಗಳನ್ನು ಉಲ್ಲಂಘಿಸಿ ವಿಮಾನಯಾನಗಳನ್ನು ಕೈಗೊಳ್ಳಬಾರದು ಎಂದು ಪುನರುಚ್ಚರಿಸಿದೆ. ಮಾನವ ಜೀವಗಳ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಎಲ್ಲ ನಿಯಮಗಳನ್ನು ಕಟ್ಟುನಿಟ್ಟಾಗಿ

ಜಾರಿಗೊಳಿಸಲು ಹಾಗೂ ಹಾರಾಟ ಕಾರ್ಯಾಚರಣೆಯಲ್ಲಿ ಶಿಸ್ತನ್ನು ಕಾಪಾಡಿಕೊಳ್ಳಲು ವಿಮಾನಯಾನ ಸಚಿವಾಲಯ ಡಿಜಿಸಿಎಗೆ ಸೂಚನೆ ನೀಡಿದೆ.

<><><><>

ಅಂತಾರಾಷ್ಟ್ರೀಯ ಯೋಗದಿನದ ಹಿನ್ನೆಲೆಯಲ್ಲಿ ಹರಿಯಾಣದ ಕುರುಕ್ಷೇತ್ರದ ಬ್ರಹ್ಮ ಸರೋವರದಲ್ಲಿ ಇಂದು ಯೋಗ ಮ್ಯಾರಥಾನ್ ಆಯೋಜಿಸಲಾಗಿತ್ತು. ಮುಖ್ಯಮಂತ್ರಿ ನಾಯಬ್ ಸಿಂಗ್ ಸೈನಿ ಮ್ಯಾರಥಾನ್‌ಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸೈನಿ ಮಾತನಾಡಿ, ಈ ವರ್ಷದ ಅಂತಾರಾಷ್ಟ್ರೀಯ ಯೋಗದಿನದ ಘೋಷವಾಕ್ಯದಂತೆ ಹರಿಯಾಣದ ಯುವಕರನ್ನು ಯೋಗದೊಂದಿಗೆ ಸಂಯೋಜಿಸುವ ಮೂಲಕ ಮಾದಕ ದ್ರವ್ಯಗಳಿಂದ ದೂರವಿಡುವ ಪ್ರತಿಜ್ಞೆಯನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು. ಯೋಗ ಮ್ಯಾರಥಾನ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು, ವಿದ್ಯಾರ್ಥಿಗಳು, ಯೋಧರು, ಮಹಿಳೆಯರು ಭಾಗವಹಿಸಿದ್ದರು ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ, ಇದೇ ೨೧ರ ಅಂತಾರಾಷ್ಟ್ರೀಯ ಯೋಗ ದಿನದಂದು ಕುರುಕ್ಷೇತ್ರದಲ್ಲಿ ಬೃಹತ್ ಯೋಗ ಶಿಬಿರ ನಡೆಯಲಿದೆ ಎಂದು ಹೇಳಿದರು.

<><><><>

ಮುಂದಿನ ೨೪ ಗಂಟೆಗಳಲ್ಲಿ ಮಹಾರಾಷ್ಟ್ರದ ರತ್ನಗಿರಿ ಹಾಗೂ ರಾಯಗಢ ಜಿಲ್ಲೆಗಳಲ್ಲಿ ಭಾರೀ ಪ್ರಮಾಣದ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ರೆಡ್ ಅಲರ್ಟ್ ಘೋಷಿಸಿದೆ.

<><><><>

ನಾರ್ಥ್ ಮೆಸಡೊನಿಯಾದಲ್ಲಿ ನಡೆದ ಡಬ್ಲ್ಯೂಟಿಟಿ ಕಂಟೆಂಡರ್ ಸ್ಕಾಪ್ಜೆ -೨೦೨೫ ಟೆಬಲ್ ಟೆನಿಸ್ ಟೂರ್ನಿಯಲ್ಲಿ ಭಾರತದ ಮಾನವ್ ಠಕ್ಕರ್ ಮತ್ತು ಮನುಷ್ ಶಾ ಜೋಡಿ ಪರಾಭವಗೊಂಡಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>